ಕರ್ನಾಟಕ ವಿಧಾನ ಸಭೆ

ಶುಕ್ರವಾರ 21ನೇ ಫೆಬ್ರವರಿ 1997ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ
ಸಭಾಂಗಣದಲ್ಲಿ ಮಧ್ಯಾಹ್ನ 3-10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ರಮೇಶ್‌ಕುಮಾರ್) ರವರು,
ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರು:- ಏನು ಸಿಂಧ್ಯರವರೆ, ನಿಮ್ಮ ಗೆಳಯರು ಇನ್ನು ಇಲ್ಲೇ ನಿಂತಿದ್ದಾರೆ. ನೀವು ಅವರಿಗೇನೂ ಹೇಳುವುದಿಲ್ಲವೇ?

(1) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ:

(ಅ) ಆಶ್ರಯ ಯೋಜನೆಯ ಮನೆಗಳನ್ನು ವಿತರಿಸುವಲ್ಲಿ ಉಂಟಾಗಿರುವ ತಾರತಮ್ಯ.

ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) :- ನಾನೂ ಸ್ವಲ್ಪ ಮಾತನಾಡುತ್ತೇನೆ. ಸನ್ಮಾನ್ಯ ಸಭಾಧ್ಯಕ್ಷರೆ, ತಾವು ನೆನ್ನೆ ಧರಣಿ ಹಿಂತೆಗೆದುಕೊಳ್ಳಿ ಎಂದು ನಮ್ಮನ್ನು ವಿನಂತಿಸಿಕೊಂಡಿರಿ, ತಾವುನಮ್ಮನ್ನು, ಸರ್ಕಾರದವರನ್ನು ಕರೆಯಿಸಿ ಮಾತನಾಡುತ್ತೇನೆ ಎನ್ನುತಕ್ಕಂಥ ವಿಚಾರ ಕೂಡ ತಿಳಿಸಿದಿರಿ. ಆದರೆ, ಇದನ್ನು ಭಾರೀ ಗಂಭೀರವಾಗಿ ನಮ್ಮ ಈ ಕಡೆಯವರು ಪರಿಗಣಿಸಿದರು. ಸರ್ಕಾರ ಈ ಆಶ್ರಯ ಯೋಜನೆಯಲ್ಲಿ ಇತ್ತೀಚಿನ ಎರಡು ಸರ್ಕಾರಿ ಆಜ್ಞೆಗಳ ಪ್ರಕಾರ, ವಿಧಾನ ಸಭೆಯ 224 ಕ್ಷೇತ್ರಗಳ ಪ್ರಕಾರ, ವಿಧಾನ ಸಭೆಯ 224 ಕ್ಷೇತ್ರಗಳ ಪೈಕಿ, 134 ಕ್ಷೇತ್ರಗಳಿಗೆ ಮಾತ್ರ ಮನೆಗಳನ್ನು ಅಲಾಟ್ ಮಾಡಿದ್ದಾರೆ. ಇನ್ನು ಅದರಲ್ಲಿ ಪಟ್ಟಣ ಪ್ರದೇಶದ 20 ಪ್ರದೇಶದ 20 ಕ್ಷೇತ್ರಗಳು, ಗ್ರಾಮಾಂತರ ಪ್ರದೇಶದ 70 ಕ್ಷೇತ್ರಗಳನ್ನು ಕೈ ಬಿಟ್ಟು ಆಜ್ಞೆಯನ್ನು ಹೊರಡಿಸಿದ್ದು, ಇದು ಮೇಲ್ನೋಟಕ್ಕೆ ಒಂದು ರೀತಿಯಾಗಿ ಅಭಾಸವಾಗಿ ಕಾಣುತ್ತದೆ. ಇದು ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಎಂದು ನಮ್ಮ ಈ ಕಡೆಯ ಸ್ನೇಹಿತರು ಪರಿಗಣಿಸಿದರು. ಆದರಲ್ಲಿ ನೀವು, ನಿಮ್ಮ ಮಾತನ್ನು ನಾವು ಲೆಕ್ಕಿಸಲಿಲ್ಲ ಎಂದು ನಮ್ಮನ್ನು ಕರೆಯತಕ್ಕಂಥ ಪ್ರಯತ್ನ ಮಾಡಲಿಲ್ಲ ಆದ್ದರಿಂದ ಈಗ ನಮ್ಮಂಥವರ ಅಂದರೆ ನನ್ನದು, ವಾಟಾಳರದು, ಶ್ರೀರಾಮರೆಡ್ಡಿಯವರದು ಈ ಕೆಲಸ ಮಾಡತಕ್ಕಂಥ ಜವಾಬ್ದಾರಿ ಬಂತು. ಇನ್ನು ಕೆಲವು ಕ್ಷೇತ್ರಗಳು ಏನು ಬಿಟ್ಟು ಹೋಗಿವೆ, ಯಾರ್ಯಾರಿಗೆ ಕೊಟ್ಟಿದ್ದಾರೆ, ಅದನ್ನು ಬೇಡ ಎಂದು ಹೇಳುವುದು ತರವಲ್ಲ ಎಂದು ಈ ಕಡೆಯವರಿಗೆ ನಾನೂ ಕೂಡ ವಿನಂತಿಸಿಕೊಂಡಿದ್ದೇನೆ. ಏಕೆಂದರೆ ಅದು ಕೂಡ ಬಡವರಿಗೆ ಕೊಟ್ಟರತಕ್ಕಂಥದ್ದು ಹಾಗೂ ಯಾರ್ಯಾರಿಗೆ ತಲುಪಿಲ್ಲ ಯಾವ ಕ್ಷೇತ್ರಗಳಲ್ಲಿ ಈ ಸೌಲಭ್ಯವನ್ನು ಒದಗಿಸಿಲ್ಲ, ಅಲ್ಲಿಗೆ ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳಿದ್ದೇನೆ. ಅವರು ಕೊಟ್ಟಿರತಕ್ಕಂಥ 134 ಕ್ಷೇತ್ರಗಳ ಪೈಕಿ 60 ಕ್ಷೇತ್ರಗಳಲ್ಲಿ ಒಂದು ನೂರು ಮನೆಯಂತೆ ಅಲಾಟ್ ಮಾಡಿದ್ದಾರೆ. 25 ಕ್ಷೇತ್ರಗಳಲ್ಲಿ 150 ಮನೆಗಳಂತೆ ಅಲಾಟ್ ಮಾಡಿದ್ದಾರೆ. 21 ಕ್ಷೇತ್ರಗಳಲ್ಲಿ 200 ಮನೆಗಳಂತೆ ಅಲಾಟ್ ಮಾಡಿದ್ದಾರೆ.

9 ಕ್ಷೇತ್ರಗಳಲ್ಲಿ 250 ಮನೆ ಅಲಾಟ್ ಮಾಡಿದ್ದಾರೆ. 5 ಕ್ಷೇತ್ರಗಳಲ್ಲಿ ಮುನ್ನೂರು ಮನೆಯಂತೆ ಅಲಾಟ್ ಮಾಡಿದ್ದಾರೆ. ಮತ್ತೆ ಚೆನ್ನಪಟ್ಟಣ ಸಾತನೂರು ಎರಡು ಕ್ಷೇತ್ರಗಳಿಗೆ ತಲಾ 450 ರಂತೆ ಕೊಟ್ಟಿದ್ದಾರೆ. ಹೊಳೆ ನರಸಿಪುರಕ್ಕೆ 1050 ಮನೆಗಳನ್ನು ಮಂಜೂರು ಮಾಡಿದ್ದಾರೆ. ಇದು ಇರಲಿ, ಏಕೆಂದರೆ ಸರ್ಕಾರದವರು ಕೊಟ್ಟಿರತಕ್ಕಂಥದ್ದರಲ್ಲಿ ಸ್ವಲ್ಪ ಏರುಪೇರು, ತಾರಮತಮ್ಯ ಇದೆ ಎನ್ನತಕ್ಕಂಥದ್ದು ನಮ್ಮ ಸ್ನೇಹಿತರು ತಿಳಿಸಿದರು. ಅದಕ್ಕೆ ನಾನು ವಿನಂತಿಸಿಕೊಂಡೆ, ಸರ್ಕಾರ ನಡೆಸುವವರಿಗೆ ಅದು ತಾವು ನಡೆಸಬಹುದು, ನೀವು ನಡೆಸಬಹುದು, ನಾಳೆ ಬಿ.ಜೆ.ಪಿ.ಯವರು ಬಂದು ನಡೆಸಬಹುದು, ಇವ್ಹೊತ್ತು ಅವರು ನಡೆಸುತ್ತಿರಬಹುದು ಅವರಿಗೆ ಅವರದೇ ಆದಂಥ ಕೆಲವು ಇಕ್ಕಟ್ಟು ಇರುತ್ತವೆ. ಆದ್ದರಿಂದ ಎಲ್ಲಾ ಕಡೆ ಒಂದೇ ತಕ್ಕಡಿ ಹಿಡಿದು ಹಂಚುವುದು ತೂಗುವುದು ಕಷ್ಟವಾಗುತ್ತದೆ. ಏರುಪೇರು ಇರತಕ್ಕಂಥದ್ದನ್ನು ನಾವು ಅರಿತುಕೊಳ್ಳೋಣ. ಈಗ ಎಲ್ಲೆಲ್ಲಿ ತಲುಪಿಲ್ಲ ಅಲ್ಲೆಲ್ಲಾ ಸೌಲಭ್ಯಗಳನ್ನು ತಲುಪಿಸೋಣ ಎನ್ನತಕ್ಕಂಥ ಮಾತನ್ನು ನಾನು ವಿನಂತಿಸಿಕೊಂಡೆ. ನಮ್ಮ ಸ್ನೇಹಿತರಾದ ಖಿರ್ಗೆಯವರು ಈಗ ಏನೆಲ್ಲಾ ಒಟ್ಟು ಕೊಟ್ಟಿದ್ದಾರೆ ಆ ಮನೆಗಳಲ್ಲಿ ಆ್ಯವರೇಜ್ ತೆಗೆದುಕೊಂಡು ಸುಮಾರು 150 ಆದರೂ ಒಂದೊಂದು ಕ್ಷೇತ್ರಕ್ಕೆ ಕೊಡಲಿ ಎನ್ನತಕ್ಕಂಥದ್ದು ಅವರ ಆಗ್ರಹ ಇದೆ; ನಾನು ಸರ್ಕಾರದವರಿಗೆ ತಿಳಿಸಿದೆ, ಅದು ಬೇಡ ನಾವು ಕನಿಷ್ಟ 70 ಕ್ಷೇತ್ರಗಳಲ್ಲಿ 100 ಅಂತ ಏನು ಕೊಟ್ಟಿದ್ದೇವೆ, ಆ ಕನಿಷ್ಠ ಇದ್ದದ್ದನ್ನು ಕೊಡುವುದಕ್ಕೆ ಮನಸ್ಸು ಮಾಡೋಣ ಎನ್ನತಕ್ಕಂಥದ್ದನ್ನು ಅವರು ಒಪ್ಪಿಕೊಂಡಿದ್ದಾರೆ. ಇನ್ನು ಎರಡನೆಯದಾಗಿ 1994-95ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಆಗಿರತಕ್ಕಂಥ ಕೆಲಸಗಳೇನು, ಕೆಲವಾರು ಕಡೆ ಕೊಡಬೇಕಾದ ಬಾಕಿ ಇನ್ನೂ ತಲುಪಿಲ್ಲ, ಸರ್ಕಾರದ ಲೆಕ್ಕದ ಪ್ರಕಾರ ಮೂರು ಕೋಟಿ ಅಥವಾ ಮೂರೂವರೆ ಕೋಟಿ ಇರಬಹುದು ಎಂದು ಹೇಳಿದ್ದಾರೆ ಆದರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರ ಪ್ರಕಾರ 6 ಕೋಟಿ ರೂ.ಗಳು ಅಂತೂ ಕೊಡಬೇಕಾದ ಬಾಕಿ ಏನು ಇದೆ, ಅದನ್ನು ಬಿಡುಗಡೆ ಮಾಡಬೇಕು ಮತ್ತೆ ಅವರು ಅದಕ್ಕೆ ಉತ್ತರ ಕೊಡಬೇಕು ನನ್ನ ಅನಿಸಿಕೆ ಪ್ರಕಾರ ಅವರು ಇದನ್ನು ಒಪ್ಪಿಕೊಳ್ಳಬಹುದು. ಇನ್ನು ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ಅಲಾಟ್ ಮಾಡುವುದಕ್ಕೆ, ವಿಧಾನ ಸಭಾ ಕ್ಷೇತ್ರಗಳ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಇತ್ತು. ಆದರೆ ಸರ್ಕಾರದವರು, ತಾಲ್ಲೂಕವಾರು ಕೋ-ಛೇರ್ಮನರನ್ನಾಗಿ ಮಾಡೋಣ ಎಂಬ ಅನಿಸಿಕೆಯನ್ನು ಹೇಳಿದರು. ಆದರೆ ನಾನು ಇನ್ನೊಮ್ಮೆ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದರಲ್ಲಿ ಪಕ್ಷದ ರಾಜಕೀಯ ಮಾಡಿಕೊಂಡು ಪಕ್ಷದ ಆಡಳಿತವನ್ನು ನಡೆಸ್ತಕ್ಕಂಥ ಕಾಲದಲ್ಲಿ ಅವರು ಪಕ್ಷದ ಸಭೆಯಲ್ಲಿ ಕುಳಿತು ತೀರ್ಮಾನ ಮಾಡಬೇಕಾಗುತ್ತದೆ. ನಾಳೆ ಯಾವುದೇ ಸರ್ಕಾರ ಬಂದರೂ ಕೂಡ ಈ ರೀತಿ ಮಾಡಬೇಕಾಗುತ್ತದೆ. ನಾವು ಬಂದರೂ ಕೂಡ ಯಾವುದೇ ಒಂದು ಪಾಲಿಸಿ ಮ್ಯಾಟರ್‌ನ್ನು ತೀರ್ಮಾನ ಮಾಡಬೇಕಾದರೆ ಮೊದಲು ಪಕ್ಷದ ವೇದಿಕೆಯಲ್ಲಿ ಚರ್ಚೆ ಮಾಡಿಕೊಂಡು ಆಮೇಲೆ ಮುಂದಕ್ಕೆ ಹೋಗುತ್ತೇವೆ. ಆದರೆ ಇವರು ಪಕ್ಷದ ವೇದಿಕೆಯಲ್ಲಿ ಚರ್ಚೆ ಮಾಡಿದಾಗ, ಕ್ಷೇತ್ರವಾರು ಸಮಿತಿ ಮಾಡುವುದಕ್ಕೆ ಒಪ್ಪಂದ ಆದ ಹಾಗೆ ಕಾಣುತ್ತಿಲ್ಲ. ಆದುದರಿಂದ ಸರ್ಕಾರದಲ್ಲಿ ನಾನು ವಿನಂತಿ ಮಾಡುವುದು ಈಗ ಏನು ಆರ್ಡರ್ ಮಾಡಿದ್ದಾರೆ ಅದು ಸರಿಯಿಲ್ಲ. ಇದರಲ್ಲಿ ತಾಲ್ಲೂಕುವಾರು ಮತ್ತು ಜಿಲ್ಲಾವಾರು

ಅಂಕಿಅಂಶಗಳು ಎನ್‌ಕ್ಲೋಸ್ಡ್ ಮಾಡಿರುವುದರಲ್ಲಿದೆ ಎಂದು ಇವರು ಕ್ಷೇತ್ರವಾರು ಅಲಾಟ್ ಮಾಡಿದ್ದಾರೆ. ಸರ್ಕಾರಿ ಆದೇಶದ ಪ್ರಿಯಾಬಲ್‌ನಲ್ಲಿ ತಾಲ್ಲೂಕುವಾರು ಎಂದು ಹೇಳಿದ್ದಾರೆ. ಆದರೆ ವಾಸ್ತವಿಕವಾಗಿ ಅಲಾಟ್ ಮಾಡಿರತಕ್ಕಂಥದ್ದು ಕ್ಷೇತ್ರವಾರು. ಆದುದರಿಂದ ಸಮಿತಿಗಳನ್ನು ಕ್ಷೇತ್ರವಾರು ಮಾಡಿದರೆ, ಒಬ್ಬರಿಗೊಬ್ಬರಿಗೆ ತಿಕ್ಕಾಟವಿರುವುದಿಲ್ಲ, ಅವರು ಫಲಾನುಭವಿಗಳನ್ನು ಗುರುತಿಸುವುದಕ್ಕೂ ಕೂಡ ಸುಲಭವಾಗುತ್ತದೆ, ಇದರ ಬಗ್ಗೆ ಕೂಡ ನಾನು ಸರ್ಕಾರದವರಲ್ಲಿ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಉಳಿಕೆ ವಿಚಾರಗಳ ಬಗ್ಗೆ ನಮ್ಮ ವಾಟಾಳ್‌ರವರು ಮಾತನಾಡಿದ ಮೇಲೆ ನಮ್ಮ ಗೆಳಯರೆಲ್ಲರೂ ಧರಣಿ ಮುಗಿಸಿ ಅವರ ಆಸನಗಳಿಗೆ ಅವರು ಬರುವ ಹಾಗೆ ಸರ್ಕಾರದವರು ಭರವಸೆ ಕೊಟ್ಟರೆ, ತದನಂತರ ಕೆಲವು ವಿಚಾರಗಳ ಬಗ್ಗೆ ನಮ್ಮ ಖರ್ಗೆಯವರು ಪ್ರಸ್ತಾಪ ಮಾಡಿದ ಮೇಲೆ ನಾನು ಮಾತನಾಡುತ್ತೇನೆ. ಇದರಲ್ಲಿ ಸರ್ಕಾರ ಪ್ರತಿಷ್ಠೆ ಮಾಡಿಕೊಳ್ಳದೇ ಉತ್ತರಿಸಬೇಕು. ಏಕೆಂದರೆ ಅನೇಕ ಹೊಸ ಶಾಸಕರು ಕಾರ್ಯ ಕಲಾಪಗಳಲ್ಲಿ ಭಾಗವಹಿಸಬೇಕೆಂಬ ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿದ್ದಾರೆ. ಇದಕ್ಕೆ ಸರ್ಕಾರದವರು ಅನುವು ಮಾಡಿಕೊಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

+ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಈ ಒಂದು ಪ್ರಸಂಗ ನಿನ್ನೆ ಆರಂಭವಾಗಿ ಪ್ರಾಮಾಣಿಕವಾಗಿರತಕ್ಕಂಥ ವಿಚಾರದಲ್ಲಿ ಧರಣಿ ನಡೆಯುತ್ತಿದೆ, ಇದರಲ್ಲಿ ಯಾವ ಮುಚ್ಚುಮರೆ ಇಲ್ಲ, ಅನ್ಯಾಯ ನಡೆದಿರತಕ್ಕಂಥದ್ದನ್ನು ಸರ್ಕಾರ..

ಅಧ್ಯಕ್ಷರು: ಹಾಗಾದರೆ ಇಷ್ಟು ದಿವಸ ಮಾಡಿದ್ದುದು ಧರಣಿ ಅಪ್ರಮಾಣಿಕವಾದದ್ದೇ? ವಾಟಾಳ್‌ರೇ ಹೇಳಿ. ನೀವು ಇಷ್ಟು ದಿವಸ ಮಾಡಿದ್ದೆಲ್ಲಾ ಈ ಮಾತಿನಿಂದ ನೀರಿನಲ್ಲಿ ಹೋಮ ಮಾಡಿದ ಹಾಗೆ ಹೊರಟು ಹೋಯಿತು.

ಶ್ರೀ ವಾಟಾಳ್ ನಾಗರಾಜ್: ಈ ಧರಣಿ ಯಾವ ಉದ್ದೇಶದಿಂದ ಮಾಡುತ್ತಿದ್ದೇವೆಯೋ ಅದು ಮುಕ್ತಾಯವಾಗುವುದಕ್ಕೆ ಮತ್ತು ಸಮಸ್ಯೆ ಬಗೆಹರಿಯುವುದಕ್ಕಾಗಿ ನಾವು ಮತ್ತು ನಂಜೇಗೌಡರು, ಶ್ರೀರಾಮರೆಡ್ಡಿ ಮತ್ತು ರೈತಸಂಘದ ಪುಟ್ಟಣಯ್ಯನವರು ಬಹಳ ಪ್ರಯತ್ನಪಟ್ಟೆವು. ಆದರೆ ಎಲ್ಲಕ್ಕಿಂತ ಹೆಚ್ಚಾಗಿ ತೆರೆಯ ಮರೆಯಲ್ಲಿ ನಡೆಸಿದ ನಿಮ್ಮ ಪ್ರಯತ್ನಗಳೇ ಅತ್ಯಂತ ಹೆಚ್ಚು ಎಂದು ಈ ಸಂದರ್ಭದಲ್ಲಿ ಅತ್ಯಂತ ಗೌರವದಿಂದ ಹೇಳಬೇಕಾಗಿದೆ. ನೀವು ಸರ್ಕಾರದವರನ್ನು ಮತ್ತು ವಿರೋಧ ಪಕ್ಷಗಳನ್ನು ಕರೆಸಿ,ಿಬ್ಬರಿಗೂ ಸಂಧಾನವಾಗುವ ರೀತಿಯಲ್ಲಿ ಸಮಸ್ಯೆ ಬಗೆಹರಿಯುವ ರೀತಿಯಲ್ಲಿ ಹೇಳಿದಿರಿ. ಇದರಲ್ಲಿ ಯಾರದೂ ಪ್ರತಿಷ್ಠೆಯ ಪ್ರಶ್ನೆ ಬರುವುದಿಲ್ಲ. ನಾವು ಧರಣಿ ಮಾಡಲೇಬೇಕೆಂಬ ಅವಶ್ಯಕತೆ ಇಲ್ಲದಿದ್ದರೂ ಸರ್ಕಾರದವರು ತಮ್ಮ ವಿವೇಚನಾ ದೃಷ್ಟಿಯಲ್ಲಿ ಕೆಲವರಿಗೆ ಹೆಚ್ಚುಮನೆಗಳನ್ನು ಅಲಾಟ್ ಮಾಡಿರತಕ್ಕಂಥದ್ದು ನಿಜ, ಅದನ್ನು ಇಲ್ಲ ಎಂದು ಅವರು ಹೇಳುವುದಕ್ಕಾಗುವುದಿಲ್ಲ. ಇದನ್ನು ಸರಿಪಡಿಸತಕ್ಕಂಥದ್ದು ಒಂದು ನೀತಿ ಪ್ರಶ್ನೆ ಎಂದು ಸರ್ಕಾರ ತೆಗೆದುಕೊಳ್ಳದೇ, ಅದನ್ನು ಸರಿಪಡಿಸತಕ್ಕಂಥ ನೀತಿಗೆ ಬಂದಿದ್ದಾರೆ. ಆದರೆ ಈ ನೀತಿಯನ್ನು ಅತಿ ಬೇಗ ಅನುಸರಿಸತಕ್ಕಂಥ ನೀತಿಗೆ ಬಂದಿದ್ದಾರೆ. ಆದರೆ ಈ ನೀತಿಯನ್ನು ಅತಿ ಬೇಗ ಅನುಸರಿಸಿ ಸರಿಪಡಿಸಬೇಕು. ಇನ್ನು ಉಳಿದಿರತಕ್ಕಂಥ 70 ಕ್ಷೇತ್ರಗಳಿಗೆ ಮತ್ತು ಪಟ್ಟಣ ಪ್ರದೇಶದ

20 ಕ್ಷೇತ್ರಗಳಿಗೆ ಅಂದರೆ ಒಟ್ಟು 90 ಕ್ಷೇತ್ರಗಳಿಗೆ ಕನಿಷ್ಟ 100 ರಿಂದ 150 ಮನೆಗಳನ್ನು ಕೊಡತಕ್ಕಂಥ ವ್ಯವಸ್ಥೆ ತಕ್ಷಣದಿಂದ ಆಗಬೇಕು. ಮಾನ್ಯ ಹಣಕಾಸಿನ ಸಚಿವರು ಇಲ್ಲೇ ಇದ್ದಾರೆ, ಅವರು ನಮ್ಮ ಗೃಹ ಮಂಡಳಿ ಸಚಿವರಿಗೆ ಹಣಕಾಸು ಇಲ್ಲ ಎಂದು ಹೇಳಿದರೂ ಕೂಡ ಸರ್ಕಾರ ಹಣವನ್ನು ಒದಗಿಸಿ ವ್ಯವಸ್ಥಿತವಾಗಿ ಕೊಡಬೇಕು. ಇದನ್ನು ನಿಧಾನ ಮಾಡಬೇಕಾಗಿಲ್ಲ. ಎಲ್ಲಕ್ಕಿಂತ ಕ್ಷೇತ್ರವಾರು ಹಂಚಿಕೆ ಮಾಡಬೇಕಾದದ್ದು ಅತ್ಯಂತ ಮುಖ್ಯವಾದುದು. ತಾಲ್ಲೂಕು ಎಂದ ತಕ್ಷಣ ಮಾನ್ಯ ಅಧ್ಯಕ್ಷರೇ, ಒಂದೊಂದು ತಾಲ್ಲೂಕುಗಳಲ್ಲೂ ಮೂರು ಜನ ಶಾಸಕರು ಬಂದಿರುತ್ತಾರೆ. ಈ ರೀತಿ ಮೂರು ಶಾಸಕರು ಬಂದಾಗ ಒಬ್ಬರು ಅಧ್ಯಕ್ಷರಾಗಿ ಇನ್ನಿಬ್ಬರು ಅದರಲ್ಲಿ ಸದಸ್ಯರಿಗೂ ಕೂಡ ಆಗಿರುವುದಿಲ್ಲ. ಅಂಥ ಪರಿಸ್ಥಿತಿಯಲ್ಲಿ ಆ ಒಂದು ವ್ಯವಸ್ಥೆಗೆ ಒಬ್ಬರನ್ನು ಸಹ ಛೇರ್ಮನ್ ಎಂದು ಮಾಡಬೇಕೆಂದು ಸರ್ಕಾರದ ನಿರ್ಧಾರವಿದೆ. ನಾವು ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ ಇದನ್ನು ತಕ್ಷಣಕ್ಕೆ ನೀವು ಮಾಡದಿದ್ದರೂ ಈ ಸದನದ ಮುಗಿಯವುದರೋಳಗೆ ನೀವು ಕ್ಷೇತ್ರವಾರು ಅಧ್ಯಕ್ಷರನ್ನು ಮಾಡಿ ಇದರ ಸಮಗ್ರತೆಯನ್ನು ಅರಿತುಕೊಂಡು ಈ ತೀರ್ಮಾನಕ್ಕೆ ತಾವು ಬರಬೇಕೆಂದು ಸರ್ಕಾರದವರಿಗೆ ನಾವು ಮತ್ತೊಮ್ಮೆ ಮನವಿಯನ್ನು ಮಾಡುತ್ತೇವೆ. ಆದುದರಿಂದ ನಾವು ಇಲ್ಲಿ ನಿಂತುಕೊಂಡು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಈ ವಿಚಾರವನ್ನು ತೆಗೆದುಕೊಂಡು ಸದನವನ್ನು ನಡೆಸಬಾರದು ಎಂಬ ಉದ್ದೇಶ ನಮಗಿಲ್ಲ. ಆದರೆ ಈಗ ಆಗಿರುವ ಅಸಮಾನತೆ ಸರಿಹೋಗತಕ್ಕಂಥ ವ್ಯವಸ್ಥೆ ಆಗಬೇಕು. ಈ ಹಿನ್ನೆಲೆಯಲ್ಲಿ ಅತ್ಯಂತ ಕಳಕಳಿಯಿಂದ ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇವೆ. ಆದುದರಿಂದ ಈಗ ಸರ್ಕಾರದ ನಿರ್ಧಾರವನ್ನು ಅವರು ಪ್ರಕಟಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುತ್ತಿದ್ದೇನೆ.

+ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಸಭಾಧ್ಯಕ್ಷರೇ, ನಿನ್ನೆಯೇ ಸರ್ಕಾರದ ನಿಲುವನ್ನು ನಾನು ತಿಳಿಸಿದ್ದೆ. ಸರ್ಕಾರದ ಈ ಆಶ್ರಯ ಮನೆಗಳನ್ನು ಹಂಚುವಾಗ ಯಾವುದೇ ಒಂದು ಕ್ಷೇತ್ರಕ್ಕೆ ಕಮ್ಮಿ ಅಲಾಟ್ ಮಾಡಬೇಕು ಅಥವಾ ಹೆಚ್ಚು ಮಾಡಬೇಕು ಎನ್ನತಕ್ಕಂಥ ಉದ್ದೇಶದಿಂದ ಇದನ್ನು ಅಲಾಟ್ ಮಾಡಿಲ್ಲ. ಶಾಸಕರು ಮಂತ್ರಿಗಳಿಗೆ ಈ ಮನೆಗಳ ಅಲಾಟ್‌ಮೆಂಟ್ ಸಂಬಂಧ ಅರ್ಜಿಗಳನ್ನು ಕೊಟ್ಟಿದ್ದರು, ಆ ಪ್ರಕಾರವಾಗಿ ಸಚಿವರು ಕೊಟ್ಟಿದ್ದಾರೆ. ಇದನ್ನು ದುರುದ್ದೇಶದಿಂದ ಮಾಡಿಲ್ಲ. ಇದರಲ್ಲಿ ಯಾರ ಕಣ್ಣಿಗೇ ಆಗಲೀ ಸುಣ್ಣ ಹಚ್ಚಬೇಕು ಅಥವಾ ಬೆಣ್ಣೆ ಹಚ್ಚಬೇಕು ಎನ್ನತಕ್ಕಂಥ ಉದ್ದೇಶ ಸರ್ಕಾರಕ್ಕೆ ಇಲ್ಲ. ಆದುದರಿಂದ ಅದರಲ್ಲಿ ದೊಡ್ಡ ಅನ್ಯಾಯ ಆಗಿಲ್ಲ ಎಂಬುದನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ಯಾವ ಕ್ಷೇತ್ರಗಳು ಬಿಟ್ಟು ಹೋಗಿವೆ, ಆ ಕ್ಷೇತ್ರಘಲಿಗೆ ನಾವು ಮನೆಗಳನ್ನು ಅಲಾಟ್ ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನೂ ಕೂಡ ಹೇಳಿದ್ದೇವೆ. ಈಗಲೂ ಕೂಡ ಸನ್ಮಾನ್ಯ ನಂಜೇಗೌಡರು ಅದನ್ನೇ ಸೂಚಿಸಿದ್ದಾರೆ. ಉಳಿದಂಥ ಕ್ಷೇತ್ರಗಳಿಗೆ ಅಲಾಟ್ ಮಾಡಬೇಕು. 70 ರಿಂದ 80 ಕ್ಷೇತ್ರಗಳಲ್ಲಿ ಈಗಾಗಲೇ 100 ಮನೆಗಳನ್ನು ಕೊಟ್ಟಿರತಕ್ಕಂಥ ಪಟ್ಟಿಯಲ್ಲಿ ಕಟ್ಟಿದ್ದಾರೆ. ಬೇರೆ ಕ್ಷೇತ್ರಗಳಲ್ಲಿ ನಾವು 150 ಮನೆಗಳನ್ನೂ ಕೊಡುವುದಕ್ಕೆ ಆಗುವುದಿಲ್ಲ. 100 ಮನೆಗಳನ್ನು ಕೊಡುವುದಕ್ಕೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇವೆ. ಈಗಲೂ ಕೂಡ ಹೇಳುತ್ತಿದ್ದೇನೆ ಪಟ್ಟಣ ಪ್ರದೇಶಗಳವರಿಗೆ ನಾವು ಇಲ್ಲಿಯವರೆಗೆ ಯಾರಿಗೂ ಮನೆಗಳನ್ನು

ನಾವು ಕೊಟ್ಟಿಲ್ಲ. ಏಕೆಂದರೆ ಸೈಟ್‌ಗಳನ್ನು ಅವರಿಗೆ ಕೊಡಬೇಕಾಗುತ್ತದೆ. ಸೈಟ್‌ಗಳು ದೊರಕದೇ ಹೋದರೆ ಮನೆಗಳನ್ನು ಕೊಡುವುದಕ್ಕೆ ಆಗುವುದಿಲ್ಲ. ಆ ಎಲ್ಲಾ ಕಾರಣಗಳಿಂದ ಪಟ್ಟಣ ಪ್ರದೇಶಗಳಿಗೆ ಕೊಡುವುದಕ್ಕೆ ಆಗುವುದಿಲ್ಲ. ಆದರೆ ಅದನ್ನು ಪರಿಶೀಲನೆ ಮಾಡುತ್ತೇವೆ. ಅಲ್ಲಿ ಒಂದು ಮನೆಗೆ 24 ಸಾವಿರ ರೂ.ಗಳನ್ನ ಖರ್ಚು ಮಾಡಬೇಕೆಂದು 1995-96ನೇ ಸಾಲಿನಲ್ಲಿ ಒಂದು ನೀತಿಯನ್ನು ರೂಪಿಸಲಾಗಿದೆ. ಆದರೆ ಇಲ್ಲಿಯವರೆಗೆ ಮನೆಗಳನ್ನು ಕೊಡುವುದಕ್ಕೆ ಆಗಲಿಲ್ಲ. ಇನ್ನು ಈ ಆಶ್ರಯ ಸಮಿತಿಗಳನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ಸಮಿತಿ ಮನೆಗಳನ್ನು ಅಲಾಟ್ ಮಾಡುತ್ತದೆ. ಈ ಬಗ್ಗೆ ಸರ್ಕಾರ ತಾಲ್ಲೂಕುವಾರು ಸಮಿತಿ ಮಾಡಬೇಕೆಂದು ಅಭಿಪ್ರಾಯ ಪಟ್ಟಿದೆ. ಇದಲ್ಲದೇ ನಮ್ಮ ಶಾಸಕಾಂಗ ಸಭೆಯಲ್ಲಿ ಕೂಡ ಇದೇ ರೀತಿಯ ತೀರ್ಮಾನವನ್ನು ನಾವು ಮಾಡಿದ್ದೇವೆ. ಆ ರೀತಿ ಮಾಡುವಾಗ ಆ ತಾಲ್ಲೂಕಿನಲ್ಲಿ ಬರತಕ್ಕಂಥ ಭೌಗೋಳಿಕವಾಗಿ ಬಹುತೇಕವಾಗಿ ಯಾರು ರೆಪ್ರೆಸೆಂಟ್ ಮಾಡುತ್ತಾರೋ ಅವರನ್ನು ಅಧ್ಯಕ್ಷರನ್ನಾಗಿ ಮಾಡತಕ್ಕಂಥದ್ದು ಮತ್ತು ಬೇರೆ ಪ್ರದೇಶವನ್ನು ರೆಪ್ರೆಸೆಂಟ್ ಮಾಡತಕ್ಕಂಥವರು ಯಾರು ಉಳಿದಿದ್ದಾರೆ, ಅವರನ್ನು ಕೋ-ಛೇರ್ಮನ್‌ರನ್ನಾಗಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಆದುದರಿಂದ ಅಲ್ಲಿ ಎಲ್ಲರಿಗೂ ಅವಕಾಶವಿದೆ. ಎಲ್ಲಾ ಪಕ್ಷದ ಶಾಸಕರಿಗೂ ಅವಕಾಶ ಇರುವುದರಿಂದ ಬಡವರ ಪರವಾಗಿ ಅವರ ಹೆಸರುಗಳನ್ನುಕೊಡುವುದಕ್ಕೆ, ಚರ್ಚೆ ಮಾಡುವುದಕ್ಕೆ ಅವಕಾಶಗಳು ಸಿಗುತ್ತದೆ. ಇದನ್ನು ಇನ್ನೂ ಕೂಡ ಪ್ರತಿಷ್ಠೆ ಪ್ರಶ್ನೆಯಾಗಿ ಮಾಡಬಾರದು ಎಂದು ಹೇಳುತ್ತೇನೆ. ನಮಗೆ ಇವತ್ತು ಸಂಪರ್ಕ ಮಾಡಬೇಕೆನ್ನುವ ಉದ್ದೇಶ ಇಲ್ಲ., ಪ್ರತಿಷ್ಠೆ ಮಾಡಿಕೊಳ್ಳಬೇಕು ಎನ್ನುವ ಉದ್ದೇಶವಿಲ್ಲ. ಶ್ರೀಮಾನ್ ನಂಜೇಗೌಡರು ಮತ್ತು ವಾಟಾಳ್ ನಾಗರಾಜ್‌ರವರು ಹಿರಿಯ ಸದಸ್ಯರು ಕೊಟ್ಟಿರತಕ್ಕಂಥ ಸಲಹೆಗಳನ್ನು ಕೂಡ ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ. 1994-95ನೇ ಸಾಲಿನಲ್ಲಿ ಆರು ಸಾವಿರ ಮನೆಗಳನ್ನು ಪ್ರಾರಂಭ ಮಾಡಿಬಿಟ್ಟಿದ್ದರು. ಆಗ 15 ಸಾವಿರ ರೂಪಾಯಿಗೆ ಒಂದು ಮನೆ ಇದ್ದು, ಅದರ ಪ್ರಕಾರ ಒಂಭತ್ತು ಕೋಟಿ ರೂಪಾಯಿ ಖರ್ಚು ಮಾಡಬೇಕಾಗಿತ್ತು. ಬೇರೆ ತಾಲ್ಲೂಕುಗಳಲ್ಲಿ ಪ್ರಾರಂಭ ಮಾಡಲೇ ಇಲ್ಲ. ಬೇರೆ ಕ್ಷೇತ್ರಗಳಲ್ಲಿ ಪ್ರಾರಂಭ ಮಾಡಲಿಲ್ಲ. ಅದು ಏನೇ ಇರಲಿ ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅದಕ್ಕೆ ಸುಮಾರು ಏಳು ಕೋಟಿ ರೂಪಾಯಿಗಳಷ್ಟು ಹಣ ಕೊಟ್ಟಿದ್ದೇವೆ. ಉಳಿದ ಎರಡು ಕೋಟಿ ರೂಪಾಯಿ ಕೊಡಬೇಕು, ಅದನ್ನು ಕೊಡುತ್ತೇವೆ. ಅದನ್ನು ತಪ್ಪಿಸುವುದಕ್ಕೆ ಸಾಧ್ಯವೇ ಇಲ್ಲ. ಸರ್ಕಾರ ಅದನ್ನು ಕೂಡಲೇ ಬೇಕಾಗುತ್ತದೆ. ಮನೆಗಳನ್ನು ಕಟ್ಟುತ್ತಿದ್ದು, ಅದು ವಿವಿಧ ಹಂತದಲ್ಲಿದೆ. ಅದನ್ನೂ ಕೊಡುತ್ತೇವೆಂದು ನಮ್ಮ ವಸತಿ ಸಚಿವರು ಉತ್ತರ ಕೊಟ್ಟಿದ್ದರು. ಇದನ್ನು ಪುನರುಚ್ಚಾರ ಮಾಡುತ್ತಿದ್ದೇವೆ. ಅದನ್ನೂ ಕೂಡ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ತಿಳಿಸುತ್ತಾ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರುಗಳು ಧರಣಿ ಬಿಟ್ಟು ನಮ್ಮ ಜೊತೆ ಸಹಕರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಧರಣಿ ಅಂತ್ಯ ಮಾಡುವುದು ಒಳ್ಳೆಯದು. ಬನ್ನಿ.

(ಧರಣಿಯಲ್ಲಿ ಭಾಗವಹಿಸಿದ್ದ ಮಾನ್ಯಸದಸ್ಯರುಗಳೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)

ಅಧ್ಯಕ್ಷರು: ಮಾನ್ಯ ಖರ್ಗೆಯುರೇ, ತಾವು ಮಾತನಾಡಿ, ನಂತರ ಸಂತಾಪ ಸೂಚಕ ನಿರ್ಣಯವನ್ನು ತೆಗೆದುಕೊಳ್ಳೋಣ.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ನಾವು ಒಂದು ಸಮಸ್ಯೆಯನ್ನು ಕೈಗೆತ್ತಿಕೊಂಡು ಈ ಸದನದಲ್ಲಿ ಧರಣಿಯನ್ನು ಮಾಡುತ್ತಿದ್ದೇವೆ. ಆದರೆ ಅದು ಅಂತಿಮವಾಗಿ ತಮ್ಮ ಸಹಕಾರ ಹಾಗೂ ಸಹಾಯದಿಂದ ಈ ಒಂದು ಬಿಕ್ಕಟ್ಟು ಸ್ವಲ್ಪಮಟ್ಟಿಗೆ ಪರಿಹಾರ ಆಗುವುದಕ್ಕೆ ಸಾಧ್ಯವಾಯಿತು. ಅದಕ್ಕೆ ಮೊದಲನೆಯದಾಗಿ ತಮಗೆ ವಂದಿಸುತ್ತೇನೆ. ಜೊತೆಯಲ್ಲಿ ಸಕ್ರೀಯವಾಗಿ ಇದರಲ್ಲಿ ಭಾಗವಹಿಸದಂತಹ ಮಾನ್ಯ ನಂಜೇಗೌಡರಿಗೂ ಮಾನ್ಯ ವಾಟಾಳ್ ನಾಗರಾಜ್‌ರವರಿಗೂ ಮತ್ತು ಉಪ ಮುಖ್ಯಮಂತ್ರಿಗಳಿಗೂ ಕೂಡ ಸಾಧ್ಯವಾದಷ್ಟು ಮಟ್ಟಿಗೆ ನಾವೇನು ದೂರ ಇದ್ದೆವು, ಅದನ್ನು ಸ್ವಲ್ಪಮಟ್ಟಿಗೆ ಹತ್ತಿರಕ್ಕೆ ತರತಕ್ಕಂಥ ಪ್ರಯತ್ನವನ್ನು ಮಾಡಿದ್ದಕ್ಕಾಗಿ, ಅವರನ್ನು ಕೂಡ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಆದರೆ, ನಮ್ಮ ಪದೇ ಪದೇ ಬೇಡಿಕೆ ಏನಿತ್ತು, ಅದನ್ನು ತಾವು ಗಮನದಲ್ಲಿಟ್ಟುಕೊಳ್ಳತಕ್ಕಂಥಾದ್ದು ಬಹಳ ಅವಶ್ಯ. ಏಕೆಂದರೆ ಯಾವಾಗಲೂ ಡಿಸ್ಕ್ರಿಷನರಿ ಕೋಟಾ ಎಂದರೆ 5 ಪರ್ಸೆಂಟ್, 2-3 ಪರ್ಸೆಂಟ್ ಹೆಚ್ಚುಕಡಿಮೆ ಇರುತ್ತದೆ. ಅದಕ್ಕೆ ನಮ್ಮ ಅಡ್ಡಿ ಇಲ್ಲ. ಮಂತ್ರಿಗಳಿಗೆ ಸ್ವಲ್ಪವೂ ಡಿಸ್ಕ್ರಿಷನ್ ಇಲ್ಲದೇಹೋದರೆ ಯಾವ ಮಂತ್ರಿಗಳಿಗೂ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವುದಕ್ಕೆ ಆಗುವುದಿಲ್ಲ. ಆದರಲ್ಲೂ ಕೂಡ ಡಿ-ಸೆಂಟ್ರಲೈಸೇಷನ್ ಆಫ್ ಪವರ್ ಬಂದ ಮೇಲೆ ಕೇಳುವರು ಇಲ್ಲದಂತಾಗಿದೆ ಶಾಸಕರನ್ನು ಕೇಳುವವರೇ ಇಲ್ಲ. ಕೆಲವು ಮಂತ್ರಿಗಳಿಗೆ ಇಲಾಖೆಯಲ್ಲಿ ಕೆಲಸ ಇಲ್ಲದ ಕಾರಣ ಅವರನ್ನೂ ಕೂಡ ಕೇಳುವವರಿಲ್ಲ. ಪರಿಸ್ಥಿತಿ ಹೀಗಿರುವಾಗ ಐದು ಪರ್ಸೆಂಟ್ ಡಿಸ್ಕ್ರಿಷನ್ ಇಟ್ಟು, ಮಂತ್ರಿಗಳಿಗೆ ಅವರ ಇಲಾಖೆಯಲ್ಲಿ ಇಷ್ಟು ಹಕ್ಕಿದೆ ಎಂದು ಗುರುತಿಸಬೇಕು, ಆ ದೃಷ್ಟಿಯನ್ನು ಇಟ್ಟುಕೊಂಡರೆ ಬಹಳ ಸಂತೋಷ, ಆದರೆ, ಇವತ್ತು 40 ಸಾವಿರ ಮನೆಗಳಲ್ಲಿ ಎರಡು ಸಾವಿರ ಮನೆಗಳನ್ನು ನ್ಯಾಯವಾಗಿ ಕೊಟ್ಟರೆ, ಲ್ಲರಿಗೂ ನೂರು ಮನೆಗಳಂತೆ ಕೊಟ್ಟರು. ಅದು ಮೊದಲನೆ ಆರ್ಡರ್., ಅದಕ್ಕೆ ಯಾರೂ ಕೂಡ ವಿರೋಧ ಮಾಡಲಿಲ್ಲ. ಅದಕ್ಕೆ ಎಕ್ಸ್‌ನಷನ್ ತೆಗೆದುಕೊಳ್ಳಲಿಲ್ಲ. ಇನ್ನು 20 ಸಾವಿರ ಮನೆಗಳು ಎಂದರೆ 50 ಪರ್ಸೆಂಟ್ ಮನೆಗಳನ್ನು ಇನ್‌ಡಿಸ್ಕ್ರಿಮಿನೇಟಲಿ ಕೊಟ್ಟಿದ್ದಕ್ಕಾಗಿ ಇದು ಪ್ರಶ್ನೆ ಬಂದಿತು 20 ಸಾವಿರದಲ್ಲಿ ನೀವು 2-3 ಸಾವಿರ ಇಟ್ಟುಕೊಂಡು ಕೊನೆಗೆ ದಿನಾಂಕ 8.1.97 ರಂದು ಒಂದು ಆರ್ಡರ್ ಹೊರಡಿಸಿದ್ದೆ ಇದ್ದಿದ್ದರೆ ಈ ಸಮಸ್ಯೆ ಇವತ್ತು ಉದ್ಭವ ಆಗುತ್ತಿರಲಿಲ್ಲ. ಒಂದು ವೇಳೆ 18 ಸಾವಿರ ಮನೆಗಳನ್ನು ಅವರು ನ್ಯಾಯವಾಗಿ ಕೊಟ್ಟು ಮಾಡಿದ್ದರೆ, ಇದು ಆಗುತ್ತಿರಲಿಲ್ಲ ಇದನ್ನೆಲ್ಲಾ ಮಂತ್ರಿಗಳು ಮತ್ತು ಸರ್ಕಾರ ಗಮದಲ್ಲಿ ಇಟ್ಟುಕೊಳ್ಳುವಂತಹ ಅವಶ್ಯಕತೆ ಇದೆಯೆಂದು ಹೇಳುತ್ತಿದ್ದೇನೆ ಇದು ಒಂದೇ ಇಲಾಖೆಯಲ್ಲಿ ಅಲ್ಲ. ನಬಾರ್ಡ್‌ನಲ್ಲಿ ಕೂಡ ಇದೇ ರೀತಿಯಾಗಿ ಐದು ಕೋಟಿ ರೂಪಾಯಿ ಹಣ ಬಂದಿದ್ದರೆ, ಅದರಲ್ಲಿ ಮೂರು ಕೋಟಿ ರೂಪಾಯಿ ಒಂದೇ ಜಿಲ್ಲೆಗೆ ಒಂದೇ ಕಡೆ ಕೊಟ್ಟಿದ್ದಾರೆ. ಅದಕ್ಕೆ ಡಿಸ್ಕ್ರಿಷನ್‌ನನ್ನು ಜ್ಯುಡಿಷಿಯಸ್ಲಿ ಉಪಯೋಗ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಅದಕ್ಕಾಗಿ ಇದನ್ನು ಕ್ಷೇತ್ರವಾರು ಮಾಡತಕ್ಕಂಥ ಬೇಡಿಕೆ ಏನಿದೆ, ಅದರ ಬಗ್ಗೆ ತಾವು ಒಪ್ಪಿಕೊಂಡಿದ್ದೀರಿ. ಆದರೆ ಕ್ಷೇತ್ರವಾರು ಕಮಿಟಿ ಮಾಡುವ ಬಗ್ಗೆ ಚೇರ್‌ಮನ್ ಮಾಡುವುದರ ಬಗ್ಗೆ ಸ್ವಲ್ಪ ರಿಸರ್ವೇಷನ್ ಇಟ್ಟುಕೊಂಡು ತಾಲ್ಲೂಕು ಮಟ್ಟದಲ್ಲಿ ಅಧ್ಯಕ್ಷರನ್ನು ಮಾಡುತ್ತೇವೆ ಮತ್ತು ಕೋ-ಚೇರ್‌ಮನ್ ಆಗಿ ಆ ಕ್ಷೇತ್ರದಲ್ಲಿ ಬರತಕ್ಕಂಥ ಶಾಸಕರನ್ನು ಮಾಡುತ್ತೇನೆ ಎನ್ನುವುದನ್ನು ತಾವು ಸ್ಪಷ್ಟ ಪಡಿಸಿದ್ದೀರಿ. ಇವತ್ತು ನಿಜ ಹೇಳುತ್ತೇನೆ ನಿಮ್ಮ ಎಲ್ಲಾ ಸದಸ್ಯರನ್ನು ಕೇಳಿಕೊಳ್ಳಿ ನಿಮ್ಮಲ್ಲಿ ಕೂಡ ಯಾರ್ಯಾರು ರೆವಿನ್ಯೂ ಹೆಡ್ ಕ್ವಾರ್ಟರ್‌ನಲ್ಲಿ ಇರತಕ್ಕಂಥ

ಶಾಸಕರು ಇದ್ದಾರೆ, ಅವರ ಅಭಿಪ್ರಾಯ ಕೂಡ ಕ್ಷೇತ್ರವಾರು ಆಗಬೇಕೆಂದು ಇದೆ. ಅದಕ್ಕಾಗಿ ನೀವು ಇಲ್ಲಿ ಇದನ್ನು ಅನೌನ್ಸ್ ಮಾಡುವುದಕ್ಕೆ ತೊಂದರೆಯಾಗುತ್ತದೆ ಎನ್ನುವುದಾದರೆ ಕೊನೆಯ ಪಕ್ಷ ನಾಳೆ ನಾಡಿದ್ದು ನಿಮ್ಮ ಪಾರ್ಟಿಮೀಟಿಂಗ್ ಕರೆಸಿ, ನಿರ್ಣಯ ತೆಗೆದುಕೊಂಡು ನಿಮ್ಮ ಪಕ್ಷದ ನಿರ್ಣಯವೆಂದು ಹೇಳಿ ನಾವು ಹೇಳಿದರೆ ಇದು ಪ್ರತಿಷ್ಠೆ ಇಶ್ಯೂ ಆಗುತ್ತದೆ. ಅವರು ಹೇಳಿದ್ದು ಏಕೆ ಕೇಳಬೇಕು ಎನ್ನುವುದು ಇದ್ದರೆ, ಅದನ್ನು ನಿಮ್ಮ ಪಕ್ಷದ ನಿರ್ಣಯ ಎಂದು ಹೇಳಿ ಇಲ್ಲಿ ಅನೌನ್ಸ್ ಮಾಡಿ, ಅದಕ್ಕೆ ಸ್ವಾಗತ ಮಾಡುತ್ತೇವೆ. ಆದರೆ ನಮ್ಮ ಬೇಡಿಕೆ ಆ ರೀತಿಯಾಗಬೇಕೆಂದು ಇದೆ. ತಾವೂ ಕೂಡ ಅವರ ಮೇಲೆ ಒತ್ತಡ ತಂದು ನ್ಯಾಯವನ್ನು ಒದಗಿಸಿಕೊಡಬೇಕು ಎಂದು ಹೇಳುತ್ತಾ, ನೂರು ಮನೆ ಎನ್ನುವುದು ಏನಿದೆ, ಅದನ್ನು ದಯಮಾಡಿ ರೀ-ಕನ್ಸಿಡರ್ ಮಾಡಿ 150 ರಂತೆ ಮಾಡಿ. 150 ಮನೆಗಳು ಏಕೆ ಕೊಡಬೇಕೆಂದರೆ, ಈಗ ಹಂಚಿದ 20 ಸಾವಿರ ಮನೆಯಲ್ಲಿ ಪ್ರತಿಯೊಬ್ಬರಿಗೆ ನೂರು ಕೊಟ್ಟರೂ 200 ಕ್ಷೇತ್ರಗಳಿಗೆ ಕೊಡಬಹುದು. ಆದರೆ ನೀವು ಅಡಿಷನ್ ಮಾಡಿದರೆ, 150 ಎಲ್ಲರಿಗೂ ಬರುತ್ತದೆ. ನೀವು ಒಪ್ಪಿಕೊಂಡಂತಹ 70 ಕ್ಷೇತ್ರಗಳಿಗೆ 7.000 ಮನೆಗಳು, ಜೊತೆಗೆ 20,000 ಎಂದರೆ 27,000 ಮನೆ ಪ್ರತಿಯೊಂದು ಕ್ಷೇತ್ರಕ್ಕೆ ಸಹಜವಾಗಿ 150 ಮನೆಗಳು ಬರುತ್ತದೆ.

ಅಧ್ಯಕ್ಷರು: ಈಗ ಈ ಧರಣಿಗೆ ನೂರು, ಇನ್ನೊಂದು ಧರಣಿಗೆ 50 ಮಾಡಿಸೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇಲ್ಲ, ಪದೇ ಪದೇ ಧರಣಿ ಮಾಡಿ, ಈ ಸದನದ ಸಮಯವನ್ನು ಹಾಳು ಮಾಡಬೇಕು ಎನ್ನುವ ಇಚ್ಛೆ ನಮಗೆ ಇಲ್ಲ.

ಶ್ರೀ ಮಂಜುನಾಥ ಸಿ. ಕುನ್ನೂರು: ನಮಗೆ ಮನೆಗಳು ಬೇಕು ಎಂದು ಈ ಧರಣಿ ಮಾಡಲಿಲ್ಲ. ನ್ಯಾಯಯುತವಾಗಿ ಕ್ಷೇತ್ರವಾರು ಹಂಚಬೇಕೆಂದು ಧರಣಿ ಮಾಡಿದ್ದುದು.

ಅಧ್ಯಕ್ಷರು: ನಾನು ತಮಾಷೆ ಹೇಳಿದೆ.

ಶ್ರೀ ಹೆಚ್.ಎನ್. ನಂಜೇಗೌಡ: ಮತ್ತೆ ಯಾವಾಗ ಧರಣಿ ಕುಳಿತುಕೊಳ್ಳಬೇಕೆಂದು ತಾವು ಅಪ್ಪಣೆ ಕೊಡಿಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಎಲ್ಲಾ ಕ್ಷೇತ್ರಕ್ಕೂ ಇದು ಬರಲಿ ಎನ್ನುವ ದೃಷ್ಟಿಯಿಂದ ಧರಣಿ ಮಾಡಿದ್ದುದು. ಏಕೆಂದರೆ ಕರ್ನಾಟಕ ಅರ್ಧ ಭಾಗ ಬಿಟ್ಟು ಹೋಗಿತ್ತು. ಬಡವರು ಎಂದರೆ ಎಲ್ಲಾ ಕಡೆಯಲ್ಲೂ ಇದ್ದಾರೆ. ಅವರು ಯಾವುದೇ ಒಂದು ಪಕ್ಷ ಪಂಗಡಕ್ಕೆ ಸೇರಿದವರಲ್ಲ. ವಾತಾವರಣ ನೋಡಿಕೊಂಡು ಅನೇಕ ಸಾರಿ ತಮ್ಮ ಮತವನ್ನು ಕೊಡುತ್ತಾರೆ. ನಮಗೆ ಕೊಡಬೇಕು, ಅವರಿಗೆ ಕೊಡಬೇಕೆಂದು ಇಲ್ಲ. ಅವರವರೇ ಸಂದರ್ಭ ಬಂದಾಗ ತಿಳಿದುಕೊಂಡು, ಯಾವ ರೀತಿ ಮತದಾನ ಮಾಡಬೇಕು ಎನ್ನುವ ಪ್ರಜ್ಞೆ ಅವರಿಗೆ ಬಂದಿದೆ. ಆದಕ್ಕಾಗಿ ದಯವಿಟ್ಟು ಇನ್ನು ಮುಂದಾದರೂ ಕೂಡ ಅವರಿಗೆ ಡಿಸ್ಕ್ರಿಮಿನೇಟ್ ಮಾಡತಕ್ಕಂಥದ್ದು ಮಾಡಬಾರದು. ಇದು ಒಂದೇ ವಿಷಯದಲ್ಲಿ ಅಲ್ಲ, ಇನ್ನು ಮುಂದೆ ಅದು ಸ್ಕೂಲ್ ಇರಬಹುದು, ಅಥವಾ ಕಮ್ಯೂನಿಟಿ ಹಾಲ್ ಇರಬಹುದು, ಅಂಗನವಾಡಿ ಇರಬಹುದು, ಯಾವುದೇ ವೆಲ್‌ಫೇರ್ ಸ್ಕೀಮ್ ಇರಲಿ ಅದನ್ನು ಎಲ್ಲಾ ಬಡವರಿಗೆ ತಲುಪತಕ್ಕಂಥ ರೀತಿಯಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಇರತಕ್ಕಂಥ

ಐದು ಕೋಟಿ ಜನರ ಸರ್ಕಾರ ಇದು ಎನ್ನುವಂತಹ ಭಾವನೆ ಬರಬೇಕು. ನಾವು ಕೇವಲ ಚುನಾಯಿತರಾಗಿದ್ದೇವೆ, ನಮ್ಮ ಮತಕ್ಷೇತ್ರಕ್ಕೆ ಸರ್ಕಾರ ಇದೆ ಎನ್ನುವ ಭಾವನೆ ಬಂದರೆ, ಅದು ನಿಮಗೆ ಅಪಾಯ ಆಗುತ್ತದೆ., ತೊಂದರೆಯೂ ಆಗುತ್ತದೆ. ಅದಕ್ಕಾಗಿ ದಯವಿಟ್ಟು ಇಡೀ ದೇಶಕ್ಕೆ, ಇಡೀ ರಾಜ್ಯಕ್ಕೆ ಸರ್ಕಾರ ಇದೆ ಎನ್ನುವ ಭಾವನೆಯನ್ನು ತಾವು ತಂದುಕೊಡುತ್ತೀರಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಈಗ ಏನು ಆಶ್ವಾಸನೆ ಕೊಟ್ಟಿದ್ದಾರೆ, ಅದನ್ನು ಈ ಸದನದ ಮುಕ್ತಾಯ ಆಗುವುದರ ಒಳಗಾಗಿ ಸರ್ಕಾರಿ ಆಜ್ಞೆಯನ್ನು ಹೊರಡಿಸಿ, ಮತ್ತು ಪುನಃ ಕ್ಷೇತ್ರವಾರು ಅಧ್ಯಕ್ಷರನ್ನು ಮಾಡುವುದಕ್ಕೆ ಇಲ್ಲಿ ಘೋಷಣೆ ಮಾಡುತ್ತಾರೆ ಎನ್ನುವ ನಂಬಿಕೆಯನ್ನು ತಮ್ಮ ಮುಖಾಂತರ ಇಟ್ಟುಕೊಂಡು ಈ ಒಂದು ಇತ್ಯರ್ಥವನ್ನು ಬಹಳ ಒಳ್ಳೆಯ ರೀತಿಯಲ್ಲಿ ಮುಗಿಸಿಕೊಟ್ಟಿದ್ದಕ್ಕಾಗಿ ನಾನು ತಮಗೆ ಪುನಃ ಅಭಿನಂದಿಸಿ, ನಾನು ಒಂದು ವಿಚಾರವನ್ನು ಮರೆತಿದ್ದೆ, ಮಾನ್ಯ ಉಪಮುಖ್ಯಮಂತ್ರಿಗಳು 1994-95ರ ಬಾಕಿ ಹಣವನ್ನುಬಿಡುಗಡೆ ಮಾಡುತ್ತೇವೆಂದು ಏನು ಆಶ್ವಾಸನೆಯನ್ನು ಕೊಟ್ಟಿದ್ದಾರೆ, ಈ ಬಗ್ಗೆ ಬೇಗನೆ ಆರ್ಡರ್ ಇಷ್ಯೂ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ. ರಾಮಕೃಷ್ಣ: ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಪಕ್ಷದಿಂದ ಹಿರಿಯರಾದ ನಂಜೇಗೌಡರು ಮಾತನಾಡಿದ್ದಾರೆ. ನಾನು ಹೇಳತಕ್ಕಂಥದ್ದು ಇಷ್ಟೇ ರಾಜಕೀಯ ಪಕ್ಷಗಳು. ಧರಣಿ ಮಾಡಲಿಕ್ಕೆ ಅವಕಾಶ ಕೊಡಬಾರದು ಇದು ಪ್ರಾಮುಖ್ಯವಾದುದು. ಇದಕ್ಕೆ ನಾನು ಮತ್ತೊಮ್ಮೆ ಸರ್ಕಾರದವರಲ್ಲಿ ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಬಡವರಿಗೆ ಏನೇ ಬರಲಿ, ಇಂದಿರಾ ಆವಾಸ್ ಮನೆ ಇರಬಹುದು, ಅಂಬೇಡ್ಕರ್ ಮನೆ ಇರಬಹುದು, ನಬಾರ್ಡ್ ಹಣ ಇರಬಹುದು ಅಥವಾ ಐ.ಆರ್.ಡಿ. ಪಿ. ಸಾಲ ಹಂಚಿಕೆ ಇರಬಹುದು, ಒಟ್ಟಿನಲ್ಲಿ ಯಾವುದೇ ಹಣ ಬರಲಿ ಅದು ನಮ್ಮ ರಾಜ್ಯದ್ದು ಇರಬಹುದು, ಅಥವಾ ಕೇಂದ್ರದ್ದು ಇರಬಹುದು ಏನು ಕೆಲವು ಸ್ಟಾಂಡರ್ಡ್ಸ್ ಇದೆ ಇದನ್ನು ಅನುಸರಿಸಿ ತಾವು ಕೊಟ್ಟು ಬಿಟ್ಟರೆ, ನಾವು ಧರಣಿ ಮಾಡುವ ಅವಶ್ಯಕತೆ ಇರುವುದಿಲ್ಲ. ನೀವು ಧರಣಿ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಟ್ಟುಬಿಡುತ್ತೀರೋ? ಸಾಮಾಜಿಕ ನ್ಯಾಯಕ್ಕೋಸ್ಕರ ನಾವು ಹೊಡೆದಾಡಬೇಕಾಗುತ್ತದೆ, ನೋಡಿ ಇಂತಹ ಪರಿಸ್ಥಿತಿಗಳು ಬರುತ್ತವೆ. ಅದಕ್ಕೋಸ್ಕರ ಇನ್ನು ಮುಂದೆ ಇದು ಎಚ್ಚರಿಕೆ ಎಂದು ಸರ್ಕಾರದವರು ತಿಲಿದುಕೊಂಡು ಇವೊತ್ತು ನಡೆದಿರತಕ್ಕಂಥದ್ದು ಸೂಚಕ. ಈಗ ಹೌಸಿಂಗ್ ಬೋರ್ಡ್ ಇರಬಹುದು, ಮನೆಗಳ ಹಂಚಿಕೆ ಯಾವ ರೀತಿಯಾಗಿದೆ, ಇದನ್ನೆಲ್ಲ ತಾವು ತೆಗೆಸಿ ನೋಡಿ, ಇದರಲ್ಲಿ ನಮಗೆ ಪರ್ಸನಲ್ ಆಗಿ ಏನೂ ಇಲ್ಲ. ಬರೀ ಸಾಮಾಜಿಕ ನ್ಯಾಯಕ್ಕೆ ಹೊಡೆದಾಡತಕ್ಕದ್ದು. ಅದಕ್ಕೋಸ್ಕರವಾಗಿ ಇದೊಂದು ಎಚ್ಚರಿಕೆ ಎಂದು ತಾವು ತಿಳಿದುಕೊಂಡು ಇನ್ನು ಮುಂದೆ ಏನೇನು ಐಟ್ಸಂ ಇದೆ, ಅದೆಲ್ಲವನ್ನೂ ಕೂಡ ಯಾವ ರೀತಿ ಹಂಚಿಕೆ ಮಾಡಬೇಕು, ಪ್ರತಿಯೊಂದು ಕ್ಷೇತ್ರಗಳಿಗೂ ಯಾವ ರೀತಿ ಹಂಚಿಕೆ ಮಾಡಬೇಕು ಎಂಬುದನ್ನು ತಾವು ಮನಸ್ಸಿನಲ್ಲಿ ಇಟ್ಟುಕೊಂಡು ಮಾಡುತ್ತೀರಿ ಎಂದುಹೇಳಿ ನಾನು ನಂಬಿಕೊಂಡಿದ್ದೇನೆ, ಈ ಒಂದು ತಿಳಿವಾತಾವರಣಕ್ಕೆ ಬರುವುದಕ್ಕೆ ತಾವು ಸಹಕರಿಸಿದ್ದಕ್ಕಾಗಿ ತಮಗೂ, ಸರ್ಕಾರಕ್ಕೂ ನಾನು ವಂದನೆಯನ್ನರ್ಪಿಸುತ್ತೇನೆ.

ಶ್ರೀ ಎಚ್.ಎನ್. ನಂಜೇಗೌಡ: ಮಾನ್ಯ ಅಧ್ಯಕ್ಷರೆ, ಭರವಸೆ ಭರವಸೆಯಾಗಿ ಉಳಿಯಬಾರದು, ನಾಳೆ ನಾಡಿದ್ದಲ್ಲಿ ಸರ್ಕಾರಿ ಆಜ್ಞೆ ಮಾಡಿಬಿಡಿ. ಎರಡನೆಯದಾಗಿ, ಇವರೆಲ್ಲ ಇಲ್ಲಿ ಬಂದು ಕುಳಿತ ಮೇಲೆ ತಮ್ಮನ್ನು ಅಭಿನಂದಿಸಬೇಕೆಂದು ಮೊದಲು ಪ್ರಸ್ತಾಪ ಮಾಡಿದರು. ನೀವು ಬೆಳಿಗ್ಗೆ ಒಂಭತ್ತು ಕಾಲು ಗಂಟೆಗೆ ಬಂದು ಅಲ್ಲೇ ಕುಳಿತು ಶತಾಯಗತಾಯ ಇದು ಇತ್ಯರ್ಥ ಆದರೆ ಸಾಕು ಎಂದು ಅಲ್ಲಾಡದೆ ಕುಳಿತು, ನಾವು ಅಲ್ಲಿ ಇಲ್ಲಿ ಓಡಾಡಿಕೊಂಡು ಬಂದರೂ ತಾವು ಅಲ್ಲೇ ಕಾದುಕೊಂಡು ಕುಳಿತ್ತಿದ್ದು, ಬಹಳ ಸಹನೆಯಿಂದ, ಶಾಂತಿರೀತಿಯಿಂದ ಹೇಳುವವರಿಗೆ ನಮಗೆ ಕಾಣದಂತೆ ಅವರಿಗೆ ಹೇಳಿ, ಅವರಿಗೆ ಕಾಣದಂತೆ ನಮಗೆ ಹೇಳಿ ಎಲ್ಲಾ ಮಾಡಿ ಇದನ್ನು ಬಗೆಹರಿಸಿದ್ದೀರಿ, ನಿಮಗೆ ಮನಪೂರ್ವಕವಾದಂಥ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು: ಸಂದಿಗ್ಧತೆಯಿಂದ ಪಾರಾಗಲು ಸಹಕರಿಸಿದ ತಮಗೆಲ್ಲರಿಗೂ ಧನ್ಯವಾದಗಳು.

(2) ಸಂತಾಪ ಸೂಚನೆ

ಅಧ್ಯಕ್ಷರು: ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎ.ಎನ್.ಬೆಳ್ಳಿಯಪ್ಪ ಹಾಗೂ ಪ್ರಜಾಪ್ರತಿನಿಧಿಯ ಸಭೆಯ ಸದಸ್ಯರು ಹಾಗೂ ವಿಧಾನಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಎಸ್. ವೀರಮ್ಮರವರುಗಳು ನಿಧನರಾದುದನ್ನು ಈ ಸದನಕ್ಕೆ ಅತ್ಯಂತ ವಿಷಾದಿಂದ ತಿಳಿಸುತ್ತಿದ್ದೇನೆ.

ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಎ.ಎಂ. ಬೆಳ್ಳಿಯಪ್ಪನವರು ದಿನಾಂಕ:20-2-97 ರಂದು ನಿಧನರಾದರು, 5ನೇ ವಿಧಾನಸಭೆಗೆ ಮಡಿಕೇರಿ ಕ್ಷೇತ್ರದಿಂದ, ಹಾಗೂ 9ನೇ ವಿಧಾನಸಭೆಗೆ ಸೋಮವಾರಪೇಟೆ ಕ್ಷೇತ್ರದಿಂದ ಆಯ್ಕೆಯಾಗಿದ್ದ ಶ್ರೀಯುತರು ಮೀನುಗಾರಿಕೆ ಹಾಗೂ ಬಂದರು ಖಾತೆಯ ರಾಜ್ಯಮಂತ್ರಿಗಳಾಗಿ ಹಾಗೂ ಸಮಾಜ ಸೇವಕರಾಗಿಯೂ ಕಾರ್ಯನಿರ್ವಹಿಸಿದ್ದರು. ಅವರು ಖ್ಯಾತ ವಕೀಲರಾಗೀದ್ದು ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು. ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಎಸ್. ವೀರಮ್ಮರವರು ದಿನಾಂಕ 17-02-1997 ರಂದು ನಿಧನರಾದರು. 1941 ರಿಂದ 1945ರ ಅವಧಿಯಲ್ಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಹಾಗೂ 1952 ರಿಂದ 59ರವರೆಗೆ ವಿಧಾನಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿದ ಇವರು ಮಹಿಳೆಯರ ಏಳಿಗೆಗಾಗಿ ಅವಿರತವಾಗಿ ಶ್ರಮಿಸಿದ್ದರು. ಇವರ ನಿಧನದಿಂದ ರಾಜ್ಯವು ಒಬ್ಬ ಸಮಾಜ ಸೇವಾಕರ್ತೆಯನ್ನು ಕಳೆದುಕೊಂಡಂತಾಗಿದೆ. ಈ ಮಹನೀಯರ ಗೌರವಾರ್ಥವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು: ಈ ಸದನವು ಅಂಗೀಕರಿಸದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.